
# ಪವಿತ್ರ ಯಾತ್ರೆ



ಪುಷ್ಪ ಶೇಷಾದ್ರಿ

> " ದೀನ ದೇವೋ ಭವ, ದರಿದ್ರ ದೇವೋ ಭವ" ಎಂಬ ಸ್ವಾಮಿ ವಿವೇಕಾನಂದರ ಆದರ್ಶವನ್ನು ಪ್ರತಿಬಿಂಬಿಸುವ ಸುಂದರ ಕಥೆಯಿದು. ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಕಥೆಯನ್ನು ನಿರೂಪಿಸಿರುವ ಶ್ರೀಮತಿ ಪುಷ್ಪ ಶೇಷಾದ್ರಿಯವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.

**ಸೋಮನಹಳ್ಳಿ** ಎಂಬ ಒಂದು ಸಣ್ಣ ಗ್ರಾಮದಲ್ಲಿ ರವಿ ಮತ್ತು ಗೌತಮ ಎಂಬ ಇಬ್ಬರು ಆಪ್ತ ಗೆಳೆಯರಿದ್ದರು. ಶಾಲೆಗೆ ಹೋಗುವಾಗ, ಮತ್ತೇನಾದರೂ ವಿಶೇಷ ಕೆಲಸ ಮಾಡುವಾಗ ಇಬ್ಬರೂ ಹೊಂದಿಕೊಂಡು ಜೊತೆಯಲ್ಲೇ ಮಾಡುತ್ತಿದ್ದರು. ನೆರೆಯ ಗ್ರಾಮ ಭೀಮನಹಳ್ಳಿಯಲ್ಲಿ ಒಂದು ಆಶ್ರಮ ಸಹ ಇತ್ತು. ಇಬ್ಬರು ಗೆಳೆಯರೂ ಭಾನುವಾರ ಶಾಲೆಗೆ ಬಿಡುವಾದ್ದರಿಂದ ಆಶ್ರಮಕ್ಕೆ ಹೋಗಿ, ಸತ್ಸಂಗ, ಭಜನೆ, ಪ್ರವಚನಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಇದರಿಂದ ಇಬ್ಬರ ಮನಸ್ಸಿನಲ್ಲಿಯೂ ಬಹಳ ಪರಿವರ್ತನೆಗಳಾಗಿ, ದೈವಭಕ್ತಿಯೂ ಉಂಟಾಯಿತು.

ರವಿಯು ಶ್ರೀಮಂತ ಕುಟುಂಬದಿಂದ ಬಂದವನು. ಅವನಿಗೆ ಕಷ್ಟವೇನೆಂಬುದು ಅರಿವಿರಲಿಲ್ಲ. ಗೌತಮನಾದರೋ ಕಡು ಬಡವ. ಚಿಕ್ಕ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ಹಿತಮಿತವಾದ ಜೀವನಕ್ಕೆ ಹೊಂದಿಕೊಂಡಿದ್ದ. ಒಮ್ಮೆ ಇಬ್ಬರಲ್ಲೂ ತಿರುಮಲೈ ಬೆಟ್ಟಕ್ಕೆ ಹೋಗಿ ಬರಬೇಕೆಂದು ಹಂಬಲವಾಯಿತು. ಅಷ್ಟರಲ್ಲೇ ಶಾಲೆಗೂ ಬೇಸಿಗೆಯ ರಜವಾದ್ದರಿಂದ ಆಗಲೆ ಹೋಗಿ ಬರುವುದೆಂದು ತೀರ್ಮಾನಿಸಿದರು. ಗೌತಮನು ತಾಯಿಯ ಅಪ್ಪಣೆ ಪಡೆದು, ಕಷ್ಟಪಟ್ಟು ಅಲ್ಪ-ಸ್ವಲ್ಪ ಕೂಡಿಟ್ಟ ಹಣವನ್ನು ಯಾತ್ರೆಗೆಂದು ಹೊಂದಿಸಿಕೊಂಡನು. ರವಿಗಾದರೋ ಶ್ರೀಮಂತನಾದ್ದರಿಂದ ಹಣದ ಕೊರತೆ ಇರಲಿಲ್ಲ.

ಒಂದು ಶುಭ ಮುಹೂರ್ತವನ್ನು ನೋಡಿ, ತಿರುಪತಿಗೆ ಪ್ರಯಾಣ ಮಾಡಲು ನಿರ್ಧರಿಸಿದರು. ಆಗಿನ ಕಾಲದಲ್ಲಿ ರೈಲುಗಳಾಗಲಿ, ಅಥವಾ ಎಕ್ಸ್‌ಪ್ರೆಸ್ ಬಸ್ಸುಗಳಾಗಲಿ ಇರಲಿಲ್ಲ. ಅರ್ಧ ದಾರಿ ಬಸ್‌ನಲ್ಲಿ, ಮತ್ತೆ ಇನ್ನು ಅರ್ಧ ದಾರಿಯನ್ನು ಕಾಲುನಡಿಗೆಯಲ್ಲೇ ಹೋಗಲು ನಿಶ್ಚಯಿಸಿದರು. ರಾತ್ರಿವೇಳೆ ಎಲ್ಲಾದರೂ ತಂಗುದಾಣದಲ್ಲಿ ಉಳಿದುಕೊಂಡು ಆಯಾಸ ಪರಿಹರಿಸಿಕೊಂಡು, ಬೆಳಿಗ್ಗೆ ಮುಂದೆ ಪ್ರಯಾಣ ಮಾಡುತ್ತಿದ್ದರು. ಒಂದೆರಡು ದಿನಗಳ ಪ್ರಯಾಣದ ನಂತರ, ಚಿತ್ತೂರಿನ ಬಳಿ ಒಂದು ಸಣ್ಣ ಗ್ರಾಮವನ್ನು ತಲುಪಿದರು. ಆಗ ಸಂಜೆಯಾದ್ದರಿಂದ ಅಲ್ಲೇ ತಂಗಬೇಕಿತ್ತು.

ದುರದೃಷ್ಟವಶಾತ್ ಆ ಹಳ್ಳಿಯಲ್ಲಿ ಕೆಲವು ದಿನಗಳಿಂದ ಒಂದು ಸೋಂಕು ರೋಗ ಹರಡಿತ್ತು. ಅಲ್ಲಿಯ ಜನರ ಸ್ಥಿತಿ ಚಿಂತಾಜನಕವಾಗಿತ್ತು. ಬಡತನ, ಜೊತೆಗೆ ತಕ್ಕ ಆಹಾರ, ವೈದ್ಯಚಿಕಿತ್ಸೆ ಸಹ ಇಲ್ಲದೆ, ಬಹಳ ತೊಂದರೆಗೆ ಈಡಾಗಿದ್ದರು. ಇದನ್ನು ಕಂಡ ಗೌತಮನ ಹೃದಯ ಕರಗಿತು. ಅವನ ಮನಸ್ಸು ಯಾತ್ರೆಯನ್ನು ಮುಂದುವರಿಸಲು ಹಿಂಜರಿಯಿತು. ರಾತ್ರಿ ನಿದ್ದೆ ಬಾರದೆ, ಒಂದು ನಿರ್ಧಾರಕ್ಕೆ ಬಂದು, ಬೆಳಿಗ್ಗೆ ರವಿಯನ್ನು ಉದ್ದೇಶಿಸಿ, "ಒಂದೆರಡು ದಿನ ಇಲ್ಲಿಯೇ ಉಳಿದು, ಹಳ್ಳಿಯವರಿಗೆ ಏನಾದರೂ ಸಹಾಯ ಮಾಡೋಣ ಎನಿಸುತ್ತೆ. ನಿನ್ನದೇನು ಅಭಿಪ್ರಾಯ ರವಿ?" ಎಂದ. ಆದರೆ ರವಿಗೆ ಇದು ಹಿಡಿಸಲಿಲ್ಲ. ಕೇವಲ ಯಾವುದೋ ಹಳ್ಳಿಯವರ ನೆರವಿಗಾಗಿ ಅಲ್ಲೇ ಉಳಿದು, ಹರಕೆಯನ್ನು ಮರೆತು ಹೀಗೆ ಮಾಡುವುದು ಸಮಂಜಸವೆನಿಸಲಿಲ್ಲ. ಕೊನೆಗೆ ರವಿ ಇದಕ್ಕೆ ಒಪ್ಪದೆ, ತಾನು ತಿರುಮಲೈಗೆ ಹೋಗುವುದಾಗಿಯೂ, ಎರಡು ದಿನಗಳ ನಂತರ ಗೌತಮನಿಗಾಗಿ ಬೆಟ್ಟದ ಮೇಲೆ ಕಾಯುವುದಾಗಿಯೂ ತಿಳಿಸಿ, ತನ್ನ ಪ್ರಯಾಣವನ್ನು ಮುಂದುವರೆಸಿದ.

ಮಾರನೇದಿನ ರವಿ ಪುಣ್ಯಕ್ಷೇತ್ರವಾದ ತಿರುಮಲೈಯನ್ನು ಸೇರಿದನು. ತನ್ನ ಮನದಾಸೆ ನೆರವೇರಿದ್ದಕ್ಕೆ ಬಹಳ ಸಂತಸವಾಯಿತು. ವಿಶ್ರಾಂತಿಯ ನಂತರ ಪುಷ್ಕರಿಣಿಯಲ್ಲಿ ಸ್ನಾನಮಾಡಿ, "ಗೋವಿಂದಾ, ಗೋವಿಂದಾ" ಎಂದು ನಾಮಸ್ಮರಣೆ ಮಾಡುತ್ತಿದ್ದ ಜನಸಮೂಹದ ಸಾಲಿನಲ್ಲಿ ನಿಂತನು. ಹೀಗೆ ಕೆಲವು ಘಂಟೆಗಳ ಕಾಲ ಮುನ್ನುಗ್ಗಿ ಹೋದನಂತರ, ದೇವರ ದಿವ್ಯದರ್ಶನವಾಯಿತು. ನಮ್ರತೆಯಿಂದ ಕೈಮುಗಿದು, ಕಣ್ಣುಮುಚ್ಚಿ ದೇವರಲ್ಲಿ ತನ್ನನ್ನು ತಾನೇ ಸಮರ್ಪಿಸಿಕೊಂಡನು. ಮತ್ತೆ ಒಂದು ನಿಮಿಷದ ನಂತರ ಕಣ್ಣುಬಿಟ್ಟು, ದೇವರನ್ನು ನೋಡುತ್ತಿದ್ದಾಗ, ಅಲ್ಲಿ ಅವನಿಗೆ ಆಶ್ಚರ್ಯಕರವಾದ ದೃಶ್ಯ ಕಂಡಿತು. ಬಾಲಾಜಿಯ ವಿಗ್ರಹದ ಅತಿ ಸಮೀಪದಲ್ಲೇ ತನ್ನ ಪ್ರಿಯ ಮಿತ್ರ ಗೌತಮ ಭಕ್ತಿಯಿಂದ ಕೈಮುಗಿದು ನಿಂತಿರುವುದನ್ನು ಕಂಡು ವಿಸ್ಮಯಗೊಂಡ ರವಿ. "ಗೌತಮ್" ಎಂದು ಕೈಬೀಸಿ ಕರೆದ. ಆದರೆ ಜನಜಂಗುಳಿ ಹೆಚ್ಚಾದ ಕಾರಣ ಗೌತಮನನ್ನು ಸಮೀಪಿಸುವುದಕ್ಕಾಗಲಿಲ್ಲ. ದರ್ಶನದ ನಂತರ ರವಿ ದೇವಸ್ಥಾನದ ಹೊರಬಾಗಿಲಿನಲ್ಲಿ ಗೌತಮನಿಗಾಗಿ ಕಾದುನಿಂತ. ಎಷ್ಟು ಹೊತ್ತಾದರೂ ಗೆಳೆಯನ ಸುಳಿವೇ ಸಿಗಲಿಲ್ಲ. ಮತ್ತೆ ಮಾರನೇ ದಿನ ಮತ್ತೊಂದು ಬಾರಿ ದೇವರ ದರ್ಶನ ಪಡೆದು ಹೋಗೋಣವೆಂದು, ರವಿ ದೇವರ ದರ್ಶನಕ್ಕಾಗಿ ನಿಂತನು. ಮಂದಿರವನ್ನು ಪ್ರವೇಶಿಸಿದಾಗ ಮತ್ತೆ ಗೌತಮನನ್ನು ವಿಗ್ರಹದ ಅತಿ ಸಮೀಪದಲ್ಲಿ ಕಂಡನು. ಆದರೆ ಆ ದಿನವೂ ಸಹ ಎಷ್ಟು ಹೊತ್ತು ಕಾದರೂ ಗೌತಮನು ರವಿಗೆ ಸಿಗಲೇ ಇಲ್ಲ.

"ಇವನೆಂತಹ ಗೆಳೆಯ? ಹಳ್ಳಿಯಲ್ಲಿ ದೀನದಲಿತರ ಸೇವೆ ಮಾಡಿ, ನಂತರ ಬಂದು ನಿನ್ನನ್ನು ಕಾಣುವೆನೆಂದು ಹೇಳಿ ತನಗಿಂತ

ಮೊದಲೇ ಬಂದು ದೇವರ ದರ್ಶನ ಪಡೆದು ಜಂಭ ಕೊಚ್ಚಿಕೊಳ್ಳ ಬೇಕೆಂದಿರುವನೇನೋ! ನೋಡೋಣ. ಊರಿಗೆ ಹೋದ ಮೇಲಾದರೂ ಸಿಕ್ಕೇ ಸಿಗುವನು. ಎಲ್ಲಿ ಹೋಗುವನು?" ಎಂದು ರವಿ ತನಗೆ ತಾನೇ ಸಮಾಧಾನ ಮಾಡಿಕೊಂಡು ಸೋಮನಹಳ್ಳಿಗೆ ಹಿಂದಿರುಗಿದ.

ರವಿ ಸ್ವಲ್ಪ ಸುಧಾರಿಸಿಕೊಂಡು ಆಯಾಸ ಪರಿಹರಿಸಿಕೊಂಡ ನಂತರ ಗೌತಮನ ಮನೆ ಕಡೆ ನಡೆದ. ಆ ವೇಳೆಗಾಗಲೇ ಗೌತಮನು ಹಿಂತಿರುಗಿರುವುದನ್ನು ಕಂಡು, ರವಿಗೆ ಅವನ ಮೇಲೆ ಬಹಳ ಕೋಪ ಸಹ ಬಂದಿತು. ಆದರೆ ಗೌತಮನು ರವಿಯನ್ನು ಆದರದಿಂದ ಬರ ಮಾಡಿಕೊಂಡು, "ಹೇಗಾಯಿತಪ್ಪಾ, ತಿರುಮಲೈ ಯಾತ್ರೆ? ನೀನೇ ಪುಣ್ಯವಂತ, ತಿರುಪತಿ ಯಾತ್ರೆ ಮಾಡಿ ಬಾಲಾಜಿ ದರ್ಶನ ಪಡೆದು ಬಂದೆ" ಎನ್ನಲು ರವಿಗೆ ಅತ್ಯಾಶ್ಚರ್ಯವಾಯಿತು.

"ಓಹ್! ನೀನು ಸುಮ್ಮನೆ ತಮಾಷೆ ಮಾಡಬೇಡಪ್ಪಾ, ನಿಧಾನ ವಾಗಿ ಬರುವೆನೆಂದು ಹೇಳಿ, ನನಗಿಂತ ಮೊದಲೇ ನೀನು ಸ್ವಾಮಿ ದರ್ಶನ ಪಡೆದೆಯಲ್ಲಾ? ಕೂಗಿದರೂ ಕೇಳಿಸದವನಂತೆ ನಟಿಸಿದೇ?"

ಈಗ ಅಚ್ಚರಿ ಪಡುವುದು ಗೌತಮನ ಸರದಿಯಾಗಿತ್ತು. "ಇಲ್ಲ ರವಿ, ಹಳ್ಳಿಯ ಜನರಿಗಾಗಿ ಎರಡು ದಿನ ಅಲ್ಲೇ ಉಳಿದೆ. ಆ ಹಳ್ಳಿಯ ಜನರ ಸೇವೆಗಾಗಿ ನನ್ನ ಬಳಿ ಉಳಿದಿದ್ದ ಹಣವನ್ನು ಅಲ್ಲೇ ಖರ್ಚುಮಾಡಿದೆ. ಅಮ್ಮ ಬುತ್ತಿಯಾಗಿ ಕಟ್ಟಿಕೊಟ್ಟಿದ್ದ ಅವಲಕ್ಕಿ, ಉಂಡೆಗಳನ್ನು ಸಹ ಅವರಿಗೇ ಹಂಚಿದೆ. ಆದರಿಂದ ಕೇವಲ ಕೆಲವು ಜನರಿಗಷ್ಟೇ ನಾನು ಸೇವೆ ಮಾಡಲು ಸಾಧ್ಯವಾಯಿತು. ಸ್ವಲ್ಪಮಟ್ಟಿಗೆ ಅವರು ಸುಧಾರಿಸಿ, ಚೇತರಿಸಿಕೊಂಡರು. ಯಾತ್ರೆ ಮುಂದುವರಿಸಲು ನನ್ನ ಬಳಿ ಸಾಕಷ್ಟು ಹಣ ಉಳಿಯಲಿಲ್ಲ. ಆದರೆ ಕೆಲವರಿಗಾದರೂ ಸೇವೆ ಮಾಡುವ ಭಾಗ್ಯ ನನಗೆ ದೊರೆಯಿತು. ಬೇಸರ ವಿಲ್ಲದೇ, ಸಂತೋಷವಾಗಿ ಸೋಮನಹಳ್ಳಿಗೆ ಹಿಂದಿರುಗಿ ನಿನಗಾಗಿ ಕಾಯುತ್ತಿರುವೆ. ತಿರುಪತಿಯ ವೈಭವವನ್ನು ನೀನು ಕಣ್ಣಾರೆ ಕಂಡಿರುವೆ. ಅದನ್ನಾದರೂ ನಿನ್ನ ಬಾಯಿಂದ ಕೇಳುವ ತವಕವಾಗಿದೆ. ತಿಳಿಸು ವೆಯಾ?" ಎಂದನು.

ರವಿಗೆ ನಿಜವಾಗಲೂ ವಿಚಿತ್ರವೆನಿಸಿತು. ಆಗ ರವಿಯು "ಬಾಲಾಜಿಯ ಅತಿ ಸಮೀಪದಲ್ಲಿ ಕಂಡ ಆ ಗೌತಮನಾರು?" ಎಂದು ವಿಸ್ಮಯಗೊಂಡನು. ಆಗ ರವಿಯ ಮನಸ್ಸಿಗೆ ನಿಜದ ಅರಿವಾಯಿತು. ಕೂಡಲೆ ಗೌತಮನನ್ನು ಬಾಚಿ ತಬ್ಬಿಕೊಂಡು, ನಂತರ ಅವನ ಎರಡು ಕೈಗಳನ್ನು ಹಿಡಿದು, "ನೀನೇ ಪುಣ್ಯವಂತ, ದೀನದಲಿತರ ನಿಸ್ವಾರ್ಥ ಸೇವೆಯಿಂದ ನೀನು ನನಗಿಂತ ಮೊದಲೇ ದೇವರ ದರ್ಶನ ಪಡೆದೆ; ಭಗವಂತನ ಸಾಮೀಪ್ಯವನ್ನು ಅನುಭವಿಸಿದೆ, ನೀನೇ ಧನ್ಯ" ಎಂದು ಆನಂದ ಬಾಷ್ಪವನ್ನು ಸುರಿಸಿದನು.

ಕಷ್ಟದಲ್ಲಿರುವ ಜನರ ಸೇವೆಯೇ ಜನಾರ್ದನನ ಸೇವೆ ಎಂದು ಆಗ ರವಿಗೆ ಅರಿವಾಯಿತು.

❖

# ಠಾಕುರರ ಐದು ಆದರ್ಶಗಳು

ಹೆಚ್.ಎನ್. ಮುಕುಂದಸ್ವಾಮಿ

**ಶ್ರೀರಾಮಕೃಷ್ಣರ ಪ್ರಸಿದ್ಧ ಗೃಹಿಶಿಷ್ಯರಾದ ಮಹೇಂದ್ರನಾಥ ಗುಪ್ತರ ಜೀವನ ಮತ್ತು ಬೋಧನೆಗೆ ಸಂಬಂಧಿಸಿದ *Apostle and Evangelist* ಎಂಬ ಗ್ರಂಥದ ಒಂದು ಭಾಗದ ಅನುವಾದವಾಗಿದೆ ಈ ಲೇಖನ. ಅನುವಾದಿಸಿದವರು ಬೆಂಗಳೂರು ಶ್ರೀ ರಾಮಕೃಷ್ಣ ಮಠದ ಭಕ್ತರಾದ ಶ್ರೀ ಹೆಚ್. ಎನ್. ಮುಕುಂದಸ್ವಾಮಿಯವರು.**

ವೀಳೆಯದೆಲೆಯ ಪ್ರಸಂಗ

[ಶ್ರೀರಾಮಕೃಷ್ಣರನ್ನು ಬಂಗಾಳಿ ಭಾಷೆಯಲ್ಲಿ "ಠಾಕುರ್" (ಅಂದರೆ ದೇವರು) ಎಂದು ಕರೆಯುತ್ತಾರೆ.]

**ಮಹೇಂದ್ರನಾಥ ಗುಪ್ತ**: ಠಾಕುರರು ಎಷ್ಟು ಎಚ್ಚರ ದಿಂದ ಇರುತ್ತಿದ್ದರು! ಅವರು ಯಾವುದನ್ನೂ ಕೂಲಂಕಷವಾಗಿ ಗಮನಿಸದೆ ಇರುತ್ತಿರಲಿಲ್ಲ. ಒಬ್ಬ ವ್ಯಕ್ತಿ ಮೂರುಕಾಸಿಗೆ ಹತ್ತು ವೀಳೆಯದೆಲೆಯ ಬದಲು ಆರನ್ನು ತಂದನು. ಆಗ ಠಾಕುರರು ಆ ವ್ಯಕ್ತಿಯನ್ನು ಕೂಡಲೇ ತರಾಟೆಗೆ ತೆಗೆದುಕೊಂಡರು, "ನೀನೇಕೆ ಮೋಸಕ್ಕೆ ಒಳಗಾದೆ? ನೀನು ಕೊಟ್ಟ ಬೆಲೆಗೆ ಸರಿಯಾಗಿ ವೀಳೆಯ ದೆಲೆ ತರಬೇಕಾಗಿತ್ತು. ಹೆಚ್ಚಿಗೆ ಕಾಸಿದ್ದರೆ ದಾನ ಮಾಡು. ಆದರೆ ಯಾರಿಂದಲೂ ಯಾವ ಕಾರಣಕ್ಕಾಗಿಯೂ ಮೋಸ ಹೋಗಬೇಡ." ಈ ಮಾತು ಅರ್ಥಗರ್ಭಿತವಾಗಿದೆ. ಇದೇ ರೂಢಿಯಾದರೆ ಮೋಸ ಹೋಗುವುದೇ ಮನಸ್ಸಿನ ಸ್ವಭಾವವಾಗಿ ಬಿಡುತ್ತದೆ. ಕಡೆಗೆ ಕಾಮ ಕಾಂಚನದಲ್ಲಿಯೂ ಮೋಸಕ್ಕೆ ಒಳಗಾಗಬೇಕಾಗುತ್ತದೆ. ಬೇರೆ ಮಾತು ಗಳಲ್ಲಿ ಹೇಳಬೇಕೆಂದರೆ ಬೇಜವಾಬ್ದಾರಿತನ ರೂಢಿಯಾಗುತ್ತದೆ. ಠಾಕುರರು ಆಗಾಗ್ಗೆ ಹೇಳುತ್ತಿರಲಿಲ್ಲವೇ, "ಭಕ್ತನಾಗು, ಆದರೆ ಮೂರ್ಖನೇಕೆ ಆಗಬೇಕು? ಸಾಧಕನು ಎಲ್ಲ ಕಡೆಯೂ ನಿಗಾ ಇರಿಸ ಬೇಕು, ಸದಾ ಸೈನಿಕನಂತೆ ಜಾಗರೂಕನಾಗಿರಬೇಕು. ಯಾವಾಗ ಎಲ್ಲಿಂದ ಆಕ್ರಮಣವಾಗುವುದೋ!"

ಠಾಕುರರು ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಸಾಮಾನ್ಯವಾಗಿ ಕೆಲವರು ಅಂದುಕೊಳ್ಳುತ್ತಾರೆ, ಏನು ಮಹಾ ಕೊಳ್ಳೆ ಹೋದದ್ದು? ಕೆಲವು ವೀಳೆಯದೆಲೆಗಳಿಗೆ ಇಷ್ಟೊಂದು ಬಯ್ಗುಳವೇ? ಎಂದು. ಆದರೆ ವಾಸ್ತವದಲ್ಲಿ ಅದು ಹಾಗಲ್ಲ. ಠಾಕುರರ ಮಾತಿನಲ್ಲಿ ಹೆಚ್ಚು ಸತ್ವ ಇದೆ. ಅದು ಶೀಲದ ಮೇಲೆ ಪ್ರಭಾವ ಬೀರುತ್ತದೆ. ಅದಕ್ಕಾಗಿಯೇ ಸದಾ ಎಚ್ಚರಿಕೆ.

ಅದೂ ಅಲ್ಲದೆ, ಧರ್ಮ ಎನ್ನುವುದು ಈಗ ಬಾಹ್ಯವಿಷಯಗಳಲ್ಲಿ ಅಲಕ್ಷ್ಯದಿಂದ ಇರುವುದು ಎಂದಾಗಿದೆ. ಆದರೆ ಠಾಕುರರು ಇದನ್ನು